ಡಿ ಡಬ್ಲ್ಯೂ ಃ 1

ದಿನಾಂಕ 29-01-2020 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಆರ್ ಹೆಚ್ ವಕೀಲರಿಂದಃ

ದಾವಾಸ್ತಿಯ ದಕ್ಷಿಣ ದಿಕ್ಕಿಗೆ ಲಗತ್ತಾಗಿ ನನಗೆ ಸೇರಿದ ನಿವೇಶನ ಸಂಖ್ಯೆ 90 ರ ಒಂದು ಭಾಗದ ಆಸ್ತಿ ಇದೆ. 2 ನೇ ಪ್ರತಿವಾದಿ ಅವರಿಗೆ ಸೇರಿದ ನಿವೇಶನ ಸಂಖ್ಯೆ 90 ರ ಇನ್ನೊಂದು ಭಾಗವನ್ನು ಅವರು ಕ್ರಯ ಮಾಡಿದ್ದಾರೆ. 2 ನೇ ಪ್ರತಿವಾದಿ ತಮ್ಮ ಭಾಗದ ನಿವೇಶನವನ್ನು ಕ್ರಯ ಮಾಡುವಾಗ ನಿವೇಶನ ಸಂಖ್ಯೆ 90 ರ ಒಟ್ಟು ಅಳತೆ ಮಾಡಿಸಿಲ್ಲ. 2 ನೇ ಪ್ರತಿವಾದಿಯಿಂದ ಆಸ್ತಿ ಕ್ರಯ ಮಾಡಿಕೊಂಡ ಶಂಕರಗೌಡ ಇವರು, ನಿವೇಶನವನ್ನು ಅಳತೆ ಮಾಡಿಸಿಕೊಂಡು ಕ್ರಯ ಮಾಡಿಕೊಂಡಿದ್ದಾರೆ. ಕ್ರಯ ಮಾಡಿಕೊಳ್ಳುವ ಪೂರ್ವದಲ್ಲಿ ಅಳತೆ ಆಗಿದೆ. ಅಳತೆ ಸಮಯದಲ್ಲಿ ನಾನು ಇರಲಿಲ್ಲ . ಅಳತೆಯನ್ನು ಯಾರಿಂದ ಮಾಡಿಸಿದ್ದಾರೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿ ನಿವೇಶನ ಸಂಖ್ಯೆ 90 ರಲ್ಲಿ ಅವರ ಭಾಗದ ನಿವೇಶನವನ್ನು ಕ್ರಯ ಮಾಡಿಕೊಂಡ ನಂತರ ಎಷ್ಟು ವಿಸ್ತೀರ್ಣದ ನಿವೇಶನ ಪ್ಲಾಟ್ ನಂ.90 ರಲ್ಲಿ ಉಳಿದಿದೆ ಎಂದು ತಿಳಿದುಕೊಂಡಿದ್ದೇನೆ. ಅದು ಪೂರ್ವ ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 30 ಅಡಿ ಉಳಿದಿದೆ ಎಂದು ತಿಳಿದುಕೊಂಡಿದ್ದೇನೆ. ವಾಸ್ತವತೆಯಾಗಿ 40 x 35 ಅಡಿ ವಿಸ್ತೀರ್ಣ ಅಸ್ಥಿತ್ವದಲ್ಲಿಲ್ಲ. ಸದರಿ 40 x 35 ಅಡಿ ವಿಸ್ತೀರ್ಣದ ನಿವೇಶನ ನಿಖರವಾಗಿ ಎಲ್ಲಿ ಬರುತ್ತದೆ ಎಂದು ತಿಳಿದುಕೊಳ್ಳಲು ಸೂಕ್ತ ಪ್ರಾಧಿಕಾರದಿಂದ ದಾಖಲೆಯನ್ನು ಪಡೆದುಕೊಂಡಿದ್ದೇನೆ. ಆ ದಾಖಲೆ ನಾನು ನೋಡಿದ್ದೇನೆ, ಅದು ನಮ್ಮ ವಕೀಲರ ಬಳಿ ಇದೆ. ನಾನು, 2 ನೇ ಪ್ರತಿವಾದಿ ಸೇರಿಕೊಂಡು ಸದರಿ ದಾಖಲೆಯನ್ನು ಕೊಟ್ಟಿದ್ದೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇತ್ತು. ಒತ್ತುವರಿಯಾದ ಕಾರಣ ದಾಖಲೆ ಸಲ್ಲಿಸಲು ತೊಂದರೆ ಇದೆ ಎನ್ನುತ್ತಾರೆ. ನೀವು ಪದೇ ಪದೇ ಉಚ್ಚರಿಸುತ್ತಿರುವ ಒತ್ತುವರಿಯಾಗಿದೆ ಎಂದು ಹೇಳುವ ಜಾಗದ ವಿಸ್ತೀರ್ಣ ಯಾವ ನಿವೇಶನದಲ್ಲಿ ಒತ್ತುವರಿಯಾಗಿದೆ ಎನ್ನುವ ವಿಚಾರವಾಗಿ ಯಾವುದೇ ದಾಖಲೆಯನ್ನು ನಾನು ಸೂಕ್ತ ಪ್ರಾಧಿಕಾರದಿಂದ ಪಡೆದುಕೊಂಡಿಲ್ಲ.

ವಾದಿಗಳು ತಮಗೆ ಸೇರಿದ ನಿವೇಶನ ಸಂಖ್ಯೆ 89 ರಲ್ಲಿ ಕಟ್ಟಡ ಕಟ್ಟಿಸುವ ಪೂರ್ವದಲ್ಲಿ ನಿವೇಶನವನ್ನು ಸ್ವಚ್ಛ ಗೊಳಿಸಲು ಬಂದಿದ್ದರು ಎಂದರೆ ಸರಿ. ನಾನು ಹಾಗೂ 2 ನೇ ಪ್ರತಿವಾದಿ ವಾದಿಗಳ ಕೆಲಸಕ್ಕೆ ಅಡ್ಡಿ ಪಡಿಸಿದ್ದೀರಿ ಎಂದರೆ ಸರಿ. ನಂತರ ದೂರು ಸಲ್ಲಿಸಿದ ಮೇಲೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದ್ದರು. ಆ ಸಮಯದಲ್ಲಿ ನನ್ನ ಹಾಗೂ 2 ನೇ ಪ್ರತಿವಾದಿಯ ಸಮಕ್ಷಮ ಅಳತೆ ಕೆಲಸ ಮಾಡಿದ್ದಾರೆ. ಆ ಸಮಯದಲ್ಲಿ ಪ್ಲಾಟ್ ನಂ.89 ಹಾಗೂ 90 ನ್ನು ಅಳತೆ ಮಾಡಿದ್ದಾರೆ. ಆ ಸಮಯದಲ್ಲಿ ಅಧಿಕಾರಿಗಳು ನಿವೇಶನ ಸಂಖ್ಯೆ 89 ರ

ಮಾಲೀಕರು ●ಯಾವುದೇ ನಿವೇಶನವನ್ನು ಅತೀಕ್ರಮಣ ಮಾಡಿಲ್ಲ, ಆ ಕಾರಣ ಅವರಿಗೆ ತೊಂದರೆ ಮಾಡಬೇಡಿ ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ನೀವು ವಾದಿಗಳ ಕಟ್ಟಡದ ಕೆಲಸಕ್ಕೆ ತೊಂದರೆ ಮಾಡಿದ ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನಮ್ಮ ಆಸ್ತಿಯನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಬೇಡಿ ಎಂದು ತಿಳಿಸಿದ್ದೇವು ಎನ್ನುತ್ತಾರೆ. ಸಾಮಾನ್ಯವಾಗಿ ಪುರಸಭೆಯವರು ಸ್ಥಳ ಪರಿಶೀಲಿಸಿ ಕಟ್ಟಡ ಪರವಾನಿಗೆ ನೀಡುತ್ತಾರೆ ಎಂದರೆ ಸರಿ. ವಾದಿಗಳು ನಿವೇಶನ ಸಂಖ್ಯೆ 89 ರಲ್ಲಿ ಕಟ್ಟಡ ಕಟ್ಟಲು ಪರವಾನಿಗೆ ತೆಗೆದುಕೊಂಡಿದ್ದಾರೆ ಎಂದರೆ ಸರಿ, ಸಾಕ್ಷಿ ನಿವೇಶನ ಸಂಖ್ಯೆ 90 ರಲ್ಲಿ ಕಟ್ಟಡ ಕಟ್ಟಿದ್ದಾರೆ ಎನ್ನುತ್ತಾರೆ. ಪ್ಲಾಟ್ ನಂ.90 ರ ಒಂದು ಇಂಚನ್ನು ವಾದಿಗಳು ಅತೀಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗಳು ನಿವೇಶನ ಸಂಖ್ಯೆ 89 ರಲ್ಲಿರುವ ಅವರ ವಿಸ್ತೀರ್ಣದಲ್ಲಿ ಮಾತ್ರ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಈಗ ಪ್ಲಾಟ್ 89 ರಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡ ಇದೆ ಎಂದರೆ ಸರಿ. ವಾದಿಗಳು ಅವರ ಕಟ್ಟಡದ ಸುತ್ತಲೂ ಕಂಪೌಂಡ್ ಹಾಕಿಕೊಂಡಿದ್ದಾರೆ ಎಂದರೆ ಸರಿ. ವಾದಿಗಳು ಅವರ ವಿಸ್ತೀರ್ಣದ ನಿವೇಶನದಲ್ಲಿ ಕಟ್ಟಡ ಕಟ್ಟಿಸಿಕೊಂಡು ವ್ಯವಹಾರ ವಹಿವಾಟು ಮಾಡುತ್ತಾ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗಳಿಗೆ ತೂಂದರೆ ಮಾಡಲು ಸುಳ್ಳಾಗಿ ಓ ಎಸ್ ನಂ.136/2016 ರಂತೆ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ತಪ್ಪಾಗಿ ಪ್ರತಿಬಂಧಕಾಜ್ಞೆಯನ್ನು ಮಾತ್ರ ಕೋರಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿರಾಧಾರವಾಗಿ ಪ್ರಮಾಣ ಪತ್ರದಲ್ಲಿ ವಿಚಾರಗಳನ್ನು ಬರೆಸಿದ್ದೀರಿ ಎಂದರೆ ಸರಿಯಲ್ಲ. ವಾದಿಗಳು ಅವರ ನಿವೇಶನ ಸಂಖ್ಯೆ 89 ರಲ್ಲಿ ಕಟ್ಟಡ ಕಟ್ಟಿ ಪೂರ್ಣಗೊಳಿಸಿರುವ ಕಾರಣ ನೀವು ಸಲ್ಲಿಸಿರುವ ಓ ಎಸ್ ನಂ.136/2016 ಊರ್ಜಿತವಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ●ಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೆ ಸರಿ ಇದೆ.

ಸಹಿ

ಪ್ರಧಾನ ದಿವಾಣಿ ನ್ಯಾ●ಯಾಧೀಶರು,

ರಾಣೇಬೆನ್ನೂರು.